# ವಿಕ ಡೈಲಿ ಡಾಕ್ಟರ್



ಡಾ. ಸಿ.ಎನ್.ಮಂಜುನಾಥ್
ಖ್ಯಾತ ಹೃದ್ರೋಗ ತಜ್ಞರು ಹಾಗೂ ಜಯದೇವ ಆಸ್ಪತ್ರೆ ಮುಖ್ಯಸ್ಥರು



## ಪದೇಪದೆ ಎದೆನೋವು ಕಾಡ್ತಿದೆ

**ಪ್ರಶ್ನೆ:** ನನಗೆ 21 ವರ್ಷ. ಪದೇ ಪದೆ ಎದೆನೋವು ಕಾಣಿಸಿಕೊಳ್ಳುತ್ತಿತ್ತು. ವೈದ್ಯರ ಬಳಿ ತೋರಿಸಿದೆ. ಬಿಪಿ 130 /80 ಇದೆ. ಇಸಿಜಿ ಮಾಡಿದರು. ಏನು ತೊಂದರೆ ಇಲ್ಲ ಎಂದು ಹೇಳಿದ್ದಾರೆ. ಆದರೆ, ನನಗೆ ಎದೆನೋವು ಬರುವುದು ನಿಂತಿಲ್ಲ. ಪಕ್ಕೆ ನೋವು ಬರುತ್ತದೆ. ಕೆಲವೊಮ್ಮೆ ಕಡಿಮೆ ಆಗುತ್ತದೆ. ಮಾನಸಿಕ ಒತ್ತಡ ಜಾಸ್ತಿ ಆದಾಗ ಮತ್ತೆ ಎದೆನೋವು ಕಾಣಿಸಿಕೊಂಡು ಹೃದಯ ಜೋರಾಗಿ ಬಡಿದುಕೊಳ್ಳುತ್ತದೆ. ಯಾಕೆ ಹೀಗೆ ಅಂಥ ಅರ್ಥವೇ ಆಗುತ್ತಿಲ್ಲ.

– **ಪ್ರದೀಪ್** ಬೆಂಗಳೂರು.

**ಉತ್ತರ:** ನಿಮ್ಮ ಬಿಪಿ ನಾರ್ಮಲ್ ಇದೆ. ಇಸಿಜಿ ಮಾಡಿಸಿದಾಗ ತೊಂದರೆ ಇಲ್ಲ ಅಂಥ ವೈದ್ಯರು ಹೇಳಿದ್ದಾರೆ. ಆದರೂ ಎದೆನೋವು ಕಾಣಿಸಿಕೊಳ್ಳುತ್ತಿದೆ ಅಂದರೆ ನೀವು ಟ್ರೆಡ್‌ಮಿಲ್ ಇಸಿಜಿ ಹಾಗೂ ಎಕೋ ಮಾಡಿಸಿ ನೋಡಿ. ನೀವು ಮಾಡುವ ಕೆಲಸದಿಂದಾಗಿಯೂ ಎದೆ ನೋವು ಹಾಗೂ ಪಕ್ಕೆ ನೋವು ಬರಬಹುದು. ಚಾಲಕರಾಗಿ ಕೆಲಸ ಮಾಡುವವರು, ಕಾರ್ಖಾನೆಗಳಲ್ಲಿ ದುಡಿಯುವವರಿಗೆ ಸಾಮಾನ್ಯವಾಗಿ ಬೆನ್ನುನೋವು, ಪಕ್ಕೆನೋವು, ಮಾಂಸಖಂಡದ ನೋವು ಕಾಣಿಸಿಕೊಳ್ಳುತ್ತದೆ. ಆತಂಕಪಡುವ ಅಗತ್ಯವಿಲ್ಲ. ಒಳ್ಳೆಯ ವೈದ್ಯರ ಬಳಿ ತೋರಿಸಿ.



### ನೀವೂ ಪ್ರಶ್ನೆ ಕೇಳಿ...

**ವಿಕ ಡೈಲಿ ಡಾಕ್ಟರ್** ಅಂಕಣದ ಮೂಲಕ ಪ್ರತಿದಿನ ಆರೋಗ್ಯ ಸಂಬಂಧಿತ ಪ್ರಶ್ನೆಗಳನ್ನು ಕೇಳಿ ತಜ್ಞ ವೈದ್ಯರಿಂದ ಪರಿಹಾರ ಪಡೆದುಕೊಳ್ಳಬಹುದು.

ವಾಟ್ಸ್‌ಆ್ಯಪ್: 7899578866